

# ಸ್ಟಾಫ್‌ರೂಮಿನ ಸೌಗಂಧಿಕಾ ಪುಷ್ಪಗಳು

ಅದೊಂದು ಕಟ್ಟಡ. ಅಷ್ಟೇನು ಹೊಸದಲ್ಲ. ಹಳೇದ. ಸಣ್ಣ ಹುಡುಗೂರು ಹೆಂಗ ಬೆಳಕೋತ ಅಡ್ಡಾದಿಡ್ಡಿ ಅವ್ಯಾಢವ್ಯಾ ಆಗತಾವಲ್ಲ. ಥೇಟ್ ಹಾಂಗ. ಒಂದ ರೂಮಿಂದ ಸುರುವಾದ ಆ ಸಾಲಿ ಒಂದೊಂದ ಒಂದೊಂದ ರೂಮಿಗೆ ರೂಮು ಮ್ಯಾಲೆ, ಆಜೂ ಬಾಜೂಕ ಹಚಿಗೋತ ಬೆಳಕೋತ ಒಂದ ರೀತಿ ಸುಸಂಬದ್ಧವಲ್ಲದ ಆಕಾರಕ್ಕ ಬಂದು ತನ್ನ ಐವತ್ತನೇ ಹುಟ್ಟಿದ ಹಬ್ಬ ಆಚರಿಶಿಕೊಳ್ಳಲಿಕ್ಕೆ ಹತ್ತೇದ. ವೈಕುಂಠದ ದ್ವಾರಪಾಲಕರೂ ಅಷ್ಟು ಕಟ್ಟುನಿಟ್ಟಿರಲಿಕ್ಕಿಲ್ಲ ಅಂಥಾ ಜಬರದಸ್ತಿನ ಮನುಷಾರು ಇದರ ದ್ವಾರಪಾಲಕರು, ಅಂದರ ವಾಚಮ್ಯಾನುಗೊಳು. ಅವರಿಗೆ ಹಿಂದಿ ಬಿಟ್ಟು ಬ್ಯಾರೆ ಯಾವುದೂ ಭಾಷಾ ಬರೂದುಲ್ಲಪಾ. ಜಬರದಸ್ತ್ ಅಂದಕೂಡಲೆ ಆಜಾನುಬಾಹು ಅಂತ ಕಲ್ಪನಾ ಮಾಡಬ್ಯಾಡ್ರಿ. ಒಬ್ಬಾವ ನಾಕ್ ಅಡಿ ಇನ್ನೊಬ್ಬವಾ ಮೂರುವರಿ ಅಡಿ... ಅಬಾಬಾಬ ಏನಂತೀರಿ ಅವರ ಮಡಿ! ಯಾರೂ ಒಳಗ ಬರೋ ಹಂಗಿಲ್ಲ...